ಸಿಕ್ಕಿಕೊಂಡರೂ... ತೋರ್ಪಡಿಸಿಕೊಳ್ಳದೇ, "ನೋ ಕಾಮೆಂಟ್ಸ್. ಇದು ಖಾಸಗೀ ವಿಚಾರ... ಪ್ಲೀಸ್..." ಎಂದು ಕಾರು ಹತ್ತಿ ಹೊರಟರು. ಪ್ರೆಸ್‌ನವರ ಗಮನ ಕಮಿಷನರ್‌ರತ್ತ ಹೊರಳಿತು

"ಸರ್ ನಾವು ಕೇಳಿದ ಮಾತುಗಳು ನಿಜವಾ..."

ಕಮಿಷನರ್ ಉತ್ತರಿಸದೇ ಸುಮ್ಮನೇ ನಕ್ಕರು. ಅವರಿಗೆ ಹೇಗೆ ಸಮಜಾಯಿಷಿ ಕೊಡಬೇಕೆಂದು ತಿಳಿಯಲಿಲ್ಲ. ಒಂದೆರಡು ಕ್ಷಣ ತಡೆದು—

"ಸುದ್ದಿಗಿಂತ ಗಾಳಿ ಮಾತುಗಳೇ ಬೇಗ ಹರಡುತ್ತವೆ ನೋಡಿ. ಹಾಂ ನಿಮ್ಮ ನೆಟ್‌ವರ್ಕ್‌ಗೆ ನಮ್ಮನ್ನೂ ಸೇರಿಸಿಕೊಳ್ಳಿ. ನಮಗೂ ಆಗಾಗ ಮನರಂಜನೆಯ ಅವಶ್ಯಕತೆ ಇರುತ್ತದೆ..." ಎಂದ ಅವರ ಮಾತಿನ ವ್ಯಂಗ್ಯ ಯಾರಿಗೂ ತಿಳಿಯಲಿಲ್ಲ. ಅವರಿಗೂ ಅದು ಬೇಕಿರಲಿಲ್ಲ. ಎಲ್ಲರಿಗೂ ಅಲ್ಲಿಂದ ಹೊರಟರೆ ಸಾಕಿತ್ತು.

ಇನ್‌ಸ್ಪೆಕ್ಟರ್ ಗಂಗಾಧರ ಸಂದರ್ಭ ಅರಿತು, "ಇದರ ಬಗ್ಗೆ ಸೂಕ್ತ ಸಮಯದಲ್ಲಿ ನಾವೇ ಹೇಳುತ್ತೇವೆ... ದಯವಿಟ್ಟು ಇಲ್ಲಿಂದ ಹೊರಡಿ" ಎಂದ. ಅವನ ಧ್ವನಿಯಲ್ಲಿ ಕೋರಿಕೆಗಿಂತ ಆದೇಶದ ಛಾಯೆ ಇತ್ತು.

ಸುಮಾರು ಎಂಟು ಗಂಟೆಯ ವೇಳೆಗೆ ಎಲ್ಲ ಟೀವಿ ಚಾನೆಲ್‌ಗಳಲ್ಲಿ ಒಂದೇ ಬ್ರೇಕಿಂಗ್ ನ್ಯೂಸ್... 'ಗೃಹ ಕಾರ್ಯದರ್ಶಿಯ ರಾಸ ಲೀಲೆ... ಚಾಲಕನಿಂದ ಸಿಡಿ ಬಿಡುಗಡೆ' ಎಂಬ ಹೆಡ್ಡಿಂಗ್‌ನಲ್ಲಿ ಒಂದು ಬ್ಲರ್ ಮಾಡಿದ್ದ ಸಿಡಿಯನ್ನು ಪ್ಲೇ ಮಾಡತೊಡಗಿದ್ದರು. 'ಗೃಹ ಕಾರ್ಯದರ್ಶಿಗಳು ತಮ್ಮ ಸ್ನೇಹಿತನ ಫಾರಂ ಹೌಸ್‌ನಲ್ಲಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸುತ್ತಿರುವುದು' ಎಂಬ ಸಬ್ ಟೈಟಲ್ ಇತ್ತು. ದೃಶ್ಯಾವಳಿಗಳನ್ನು ಅಲ್ಲಲ್ಲಿ ಮುಸುಕುಗೊಳಿಸಿದ್ದರೂ ಅಲ್ಲಿ ನಡೆಯುತ್ತಿರುವುದು ಏನು ಎಂಬುದು ಎಲ್ಲರಿಗೂ ತಿಳಿಯುವಂತಿತ್ತು. ಆ ಸಿಡಿಯಲ್ಲಿ ಇದ್ದಿದ್ದು ಜಗದೀಶಚಂದ್ರ ಅವರೇ ಎಂದು ಸ್ಪಷ್ಟವಾಗಿ ಹೇಳಲಾಗದಿದ್ದರೂ... ಬಹುಶಃ ಅವರೇ ಎಂದು ತಿಳಿಯುವಂತಿತ್ತು.

**ಜಗದೀಶಚಂದ್ರರಿಗೆ ಚೆನ್ನಾಗಿಯೇ ತಿಳಿದಿತ್ತು. ಯಾವ ಉತ್ತರವೂ ಅವರನ್ನು ಬಚಾವ್ ಮಾಡಲು ಸಾಧ್ಯವಿರಲಿಲ್ಲ... ಎಲ್ಲದರ ನಡುವೆ ಅವರ ಮನಸ್ಸಿನಲ್ಲಿದ್ದಿದ್ದು ಅದೇ... 'ಸಾಯಂಕಾಲದ ಒಳಗೆ ಆ ಡ್ರೈವರ್ ಸಿಗಬೇಕು... ಇಲ್ಲದಿದ್ದರೆ ಕೆಲಸ ಕೆಡುತ್ತದೆ!!'**

ಎಲ್ಲ ಪ್ರೆಸ್‌ನವರು ಜಗದೀಶಚಂದ್ರ ಅವರ ಮನೆಯ ಮುಂದೆ ಜಮಾಯಿಸಿಬಿಟ್ಟಿದ್ದರು. ಇದೆಲ್ಲ ಮೊದಲೇ ಗೊತ್ತಿತ್ತು ಎಂಬಂತೆ ಅವರು ಆಗಲೇ ಒಂದು ಸುದ್ದಿಗೋಷ್ಠಿ ನಡೆಸಲು ಸಿದ್ಧ ಮಾಡಿಕೊಂಡಿದ್ದರು.

ನಿರಂತರವಾಗಿ ಬರುತ್ತಿದ್ದ ಫೋನ್‌ಗಳು... ರಾಜ್ಯದ ಮುಖ್ಯಮಂತ್ರಿ... ಗೃಹಮಂತ್ರಿಗಳ ಫೋನ್‌ಗಳು... ತಮಗೆ ಹತ್ತಿರವಾಗಿದ್ದ ಇತರೇ ಐಎಎಸ್, ಐಪಿಎಸ್ ಅಧಿಕಾರಿಗಳ ಮಾತುಗಳು ಯಾವುದೂ ಅವರನ್ನು ಕೆಂಗೆಡಿಸಿರಲಿಲ್ಲ. ಅವರಿಗಿದ್ದ ಯೋಚನೆ ಒಂದೇ— 'ಆ ಡ್ರೈವರ್ ಕೈಗೆ ಸಿಗಬೇಕು...'

ಅದೇ ಸಮಯದಲ್ಲಿ ರಾಜ್ಯದ ಅಡ್ವೊಕೇಟ್ ಜನರಲ್ ಫೋನ್ ಮಾಡಿದರು: "ಸರ್, ಖಾಸಗಿ ದೂರು ಕೊಟ್ಟು ತಪ್ಪು ಮಾಡಿದಿರಿ... ಮೊದಲು ಕೋರ್ಟ್‌ಗೆ ಹೋಗಿ ಆ ಸಿಡಿಯನ್ನು ಪ್ರಸಾರ